**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ**

**ಸಿ ಸಿ ನಂ. 1842/2022**

**ಚಾ.ಸಾ.** 1

**ಪ್ರಾ.ಸಾ.** 1

**ದಿನಾಂಕಃ 30.07.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೊಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಪ್ರಭು ಸುರೀನ |
| ತಂದೆಃ ಗಂಡನ ಹೆಸರು | ಬಸವಂತೆಪ್ಪ |
| ಉದ್ಯೋಗ | ಪಿ.ಐ |
| ವಯಸ್ಸು | 44 |
| ವಾಸಸ್ಥಳ | ದಾವಣಗೆರೆ |

**ಪ್ರಾರಂಭ ಸಮಯಃ 12.05 ಪಿ. ಎಂ.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ಯವರಿಂದ**

ನಾನು ಜನೇವರಿ 2021 ರಿಂದ ಮೇ 2022 ರವರೆಗೆ ಕಲಘಟಗಿ ಪೊಲೀಸ್ ಠಾಣೆಯಲ್ಲಿ ಪಿ ಐ ಆಗಿ ಕರ್ತವ್ಯ ನಿರ್ವಹಿಸಿದ್ದೆ.

ಸಾಕ್ಷಿಗೆ ದಿನಾಂಕ 5.12.2021 ರ ದೂರು ಮತ್ತು 4-12-2021 ರ ಪಂಚನಾಮೆಯನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-1 ಮತ್ತು 2 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ಮತ್ತು 2-(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಮಾದರಿ ಶೀಲು ಮತ್ತು ಸಹಿಗಳನ್ನು ತೋರಿಸಲಾಗಿ ಅವುಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-3 ರಿಂದ 8 ಎಂದು ಗುರುತಿಸಲಾಯಿತು.

ದಿನಾಂಕ 04.12.2021 ರಂದು ನಾನು ಮತ್ತು ಚಾಸಾ-4 ರಿಂದ 7 ರವರು ರಾತ್ರಿ 9.00 ಸಮಯದಲ್ಲಿ ರಸ್ತೆ ಗಸ್ತು ಮಾಡುತ್ತ ಕಲಘಟಗಿ ಪಟ್ಟಣದ ಯುವ ಶಕ್ತಿ ಸರ್ಕಲ ಬಳಿ ಇದ್ದಾಗ ಇಬ್ಬರು ವ್ಯಕ್ತಿಗಳು ಬಿಳಿ ಬಣ್ಣದ ಮಾರುತಿ ಓಮಿನಿ ಕಾರನಲ್ಲಿ ಅಕ್ರಮವಾಗಿ ಹಳ್ಳಿಗಳಿಗೆ ಸಾಗಾಟ ಮಾಡುತ್ತಿದ್ದಾರೆ ಎಂದು ದೂರವಾಣಿ ಮುಖಾಂತರ ನನಗೆ ಬಾತ್ಮಿ ಬಂದಿದ್ದು, ನಂತರ ಸದರೀ ವಿಷಯವನ್ನು ನನ್ನ ಸಿಬ್ಬಂದಿಗೆ ತಿಳಿಸಿ, ಸದರೀ ಸ್ಥಳದಲ್ಲಿ ಇದ್ದಂತಹ ಸಾರ್ವಜನಿಕರ ಪೈಕಿ ಚಾಸಾ-2 ಮತ್ತು 3 ರವರನ್ನು ಪಂಚರಾಗಿ ಸಹಕರಿಸುವಂತೆ ಕೋರಿ, ಅವರು ಒಪ್ಪಿಕೊಂಡ ಮೇರೆಗೆ, ಅವರೊಂದಿಗೆ ನಾನು ಮತ್ತು ನನ್ನ ಸಿಬ್ಬಂದಿ ರಾತ್ರಿ 9-45 ಗಂಟೆಯ ಸಮಯಕ್ಕೆ ಎ.ಪಿ.ಎಂ.ಸಿ ಕ್ರಾಸ್ ಬಳಿ ಬಂದು ಮರೆಯಾಗಿ ನಿಂತು ವಾಚ ಮಾಡುತ್ತಿದ್ದಾಗ ಸುಮಾರು ರಾತ್ರಿ 10.05 ಸಮಯಕ್ಕೆ ಕಲಘಟಗಿಯ ಬಸ್ ನಿಲ್ದಾಣದ ಕಡೆಯಿಂದ ಒಂದು ಬಿಳಿ ಬಣ್ಣದ ಮಾರುತಿ ಕಾರು ಬರುವುದು ನಮಗೆ ಕಂಡು ಬಂದಿತು. ಸದರೀ ವಾಹನವನ್ನು ರಾತ್ರಿ 10-10 ಸಮಯಕ್ಕೆ ಕಲಘಟಗಿಯ ಅಬ್ರನ್ ಬ್ಯಾಂಕ ಬಳಿ ನಿಲ್ಲಿಸಿ ಪಂಚರ ಸಮಕ್ಷಮ ಚಾಲಕನಾದಂತಹ 1 ನೇ ಆಪಾಧಿತನನ್ನು ವಿಚಾರಿಸಲಾಗಿ ತನ್ನ ಹೆಸರು ಮಂಜುನಾಥ ಮಲ್ಲೂರ ಎಂದು ಮತ್ತು ಅದೇ ವಾಹನದಲ್ಲಿ ಇದ್ದಂತಹ ಮತ್ತೊಬ್ಬ ವ್ಯಕ್ತಿಯಾದಂತಹ 2 ನೇ ಆಪಾಧಿತನ ಹೆಸರನ್ನು ಕೇಳಲಾಗಿ ತನ್ನ ಹೆಸರು ಮಲ್ಲಯ್ಯ ಹಿರೇಮಠ ಎಂದು ಹೇಳಿದ್ದು, ನಂತರ ವಾಹನದಲ್ಲಿ ಏನನ್ನು ಸಾಗಿಸುತ್ತಿದ್ದೀರಿ ಎಂದು ಕೇಳಲಾಗಿ, ಸದರೀ ಯವರಿಂದ ಯಾವುದೇ ಸಮಂಜಸವಾದ ಉತ್ತರವನ್ನು ಬರದೇ ಇರುವುದರಿಂದ, ನಾನು ಸದರೀ ಇಬ್ಬರನ್ನು ಕೆಳಗೆ ಇಳಿಸಿ ಪಂಚರ ಸಮಕ್ಷಮ ಸಿಬ್ಬಂದಿಯ ಸಹಾಯದಿಂದ ವಾಹನ್ನು ಪರಿಶೀಲಿಸಲಾಗಿ ಅದರಲ್ಲಿ 43 ಮದ್ಯದ ಕಾರ್ಟುನ ಬಾಕ್ಸಗಳು ಇರುವುದು ಕಂಡು ಬಂದಿತು.

ಸದರೀ ಬಾಕ್ಸಗಳನ್ನು ಪಂಚರ ಸಮಕ್ಷಮ ತೆಗೆದು ನೋಡಲಾಗಿ ಅವುಗಳಲ್ಲಿ ಓಸಿ ವಿಸ್ಕಿ 90 ಎಂಎಲ್ ನ 3552 ಟೆಟ್ರಾ ಪ್ಯಾಕೇಟಗಳು ಮತ್ತು ಮ್ಯಾಕಿನ ಟೊಸ ವಿಸ್ಕಿ 90 ಎಂಎಲ್ನ 480 ಟೆಟ್ರಾ ಪ್ಯಾಕೇಟಗಳು ಹಾಗೂ ಬ್ಯಾಂಕ ಪೈಪರ 180 ಎಂಎಲ್ ನ 45 ಟೆಟ್ರಾ ಪ್ಯಾಕೇಟಗಳು ಇರುವುದು ಕಂಡು ಬಂದಿತು. ಸದರೀ ವಾಹನದ ಸಂಖ್ಯೆಯನ್ನು ಪರಿಶೀಲಿಸಲಾಗಿ ಅದು ಕೆ.ಎ-25 ಎಂಬಿ-7343 ಇತ್ತು. 43 ಬ್ಯಾಕ್ಸಗಳ ಪೈಕಿ ತಲಾ 2 ಪಾಕೇಟಗಳನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದುಕೊಂಡು ಬಿಳಿ ಬಟ್ಟೆಯಲ್ಲಿ ಸುತ್ತಿ ಶೀಲ ಮಾಡಲಾಯಿತು. ಉಳಿದ ಮಾಲನ್ನು ಪ್ರತ್ಯೇಕವಾಗಿ ಬಿಳಿ ಬಟ್ಟೆಯಲ್ಲಿ ಸುತ್ತಿ ಶೀಲ ಮಾಡಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲನ್ನು ನೋಡಿ ಗುರುತಿಸಿದ್ದು ಅದನ್ನು ಮುಮಾ-1 ಎಂದು ಗುರುತಿಸಲಾಯಿತು.

ಘಟನಾ ಸ್ಥಳದಲ್ಲಿ ಪಂಚರ ಸಮಕ್ಷಮ ಅವರು ಹೇಳಿದಂತೆ ವಾಹನ ಬೆಳಕಿನಿಂದ ಮತ್ತು ಬೀದಿ ದೀಪದ ಸಹಾಯದಿಂದ ರಾತ್ರಿ 10.15 ರಿಂದ 11.30ರ ವರೆಗೆ ನಿಪಿ-2 ರಂತೆ ಪಂಚನಾಮೆಯನ್ನು ಜರುಗಿಸಿ ಮೇಲೆ ಹೇಳಿದ ಮದ್ಯದ ಪ್ಯಾಕೆಟಗಳನ್ನು ಅಮಾನತ್ತು ಪಡೆಸಿಕೊಂಡೆ. ದಿನಾಂಕ 05.12.2021 ರಂದು ಮದ್ಯರಾತ್ರಿ 12.30 ಗಂಟೆಯ ಸಮಯಕ್ಕೆ ಆಪಾಧಿತರು, ವಾಹನ ಮತ್ತು ಮುದ್ದೆ ಮಾಲಿನೊಂದಿಗೆ ಪೊಲೀಸ್ ಠಾಣೆಗೆ ಬಂದು ಚಾಸಾ-10 ರವರಿಗೆ ನಿಪಿ-1 ರಂತೆ ದೂರು ದಾಖಲು ಮಾಡಿರುತ್ತೇನೆ.

ದಿನಾಂಕ 05.01.2022 ರಂದು ಚಾಸಾ-8 ರವರ ಮುಖಾಂತರ ಮುಮಾ-1ನ್ನು ರಾಸಾಯನಿಕ ಪರೀಕ್ಷೆಗಾಗಿ ಧಾರವಾಡಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಸಾಕ್ಷಿಗೆ ದಿನಾಂಕ 05.01.2022ರ ಪತ್ರವನ್ನು ತೋರಿಸಲಾಗಿ ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-9 ಎಂದು, ಅದರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನಿಪಿ-9ಎ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆಪಾಧಿತರನ್ನು ಸಾಕ್ಷಿ ನೋಡಿ ಗುರುತಿಸಿದರು. ಮಾರುತಿ ವಾಹನವನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲುಃ ಅಪಾದಿತನ ಪರ ಶ್ರೀ ವಿ ಬಿ ಎಸ್ ವಕೀಲರಿಂದ**

ಸದರೀ ದಿನ ನಾವು ಪೊಲೀಸ್ ಠಾಣೆಯನ್ನು ರಾತ್ರಿ 9-00 ಗಂಟೆಗೆ ಬಿಟ್ಟೆವು. ಬಾತ್ಮಿಯಲ್ಲಿ ನಮಗೆ ಆಪಾಧಿತ ಚಹರೆಯ ಬಗ್ಗೆ ಹೇಳಿಲ್ಲ. ಪಂಚರು ಕಲಘಟಗಿಯವರು. ಅವರ ಪೂರ್ತಿ ವಿಳಾಸ ನೆನಪಿಲ್ಲ. ಚಾಸಾ-2 ಮತ್ತು 3 ರವರು ನಮ್ಮ ಠಾಣೆಯ ಖಾಯಂ ಪಂಚರು ಎಂದರೆ ಸರಿಯಲ್ಲ. ಕಲಘಟಗಿಯಿಂದ ವಾಹನವು ಹಳ್ಳಿಗಳ ಕಡೆಗೆ ಹೋಗುತ್ತಿದೆ ಎಂದು ನಮಗೆ ಬಾತ್ಮಿ ಬಂದಿತ್ತು. ಎ.ಪಿ.ಎಂ.ಸಿ ಕ್ರಾಸ್ ನಿಂದ ಅರ್ಬನ್ ಬ್ಯಾಂಕ ವರೆಗಿನ ಅಂತರ ಸುಮಾರು 800-1000 ಅಡಿಗಳು ಇರಬಹುದು. ಸುಮಾರು 1000 ಅಡಿಗಳ ದೂರದಲ್ಲಿರುವ ವಾಹನವನ್ನು ಗುರುತು ಹಿಡಿಯಲು ಆಗುವುದಿಲ್ಲ ಎಂದರೆ ಸರಿಯಲ್ಲ. ನಾವು ಯಾವುದೇ ದಾಳಿ ಮಾಡಿಲ್ಲ ಎಂದರೆ ಸರಿಯಲ್ಲ. ನಾವು ಸದರೀ ದಿನ ರಸ್ತೆ ಗಸ್ತು ಮಾಡುತ್ತಿರಲಿಲ್ಲ ಮತ್ತು ನನಗೆ ಯಾವುದೇ ಬಾತ್ಮಿ ಬಂದಿಲ್ಲ ಎಂದರೆ ಸರಿಯಲ್ಲ. ಅಂಕಿ ಸಂಖ್ಯೆ ಗಳಿಗಾಗಿ ಪ್ರಕಾರಣ ದಾಖಲಾಗಿದೆ ಎಂದರೆ ಸರಿಯಲ್ಲ. ವಾಹನದಲ್ಲಿ ಮದ್ಯದ ಮಾಲಿನ ಬಾಕ್ಸಗಳು ಇದ್ದವು ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ಆಪಾಧಿತರು ಯಾವುದೇ ಮದ್ಯವನ್ನು ಸಾಗಾಟ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-2

ರಲ್ಲಿ ಇರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಆಪಾಧಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಪ್ರಕರಣ ದಾಖಲ ಮಾಡಿ ಸುಳ್ಳು ಸಾಕ್ಷ್ಯ ಹೇಳುತ್ತಿದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೆ ಸರಿ ಇದೆ,**

**ದಿವಾಣಿ ನ್ಯಾಯಾಧೀಶರು ಹಾಗೂ**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕಲಘಟಗಿ.**